## ಎಲ್ಲಾರ್ ನಂಬರ್

ಕೊರಿಯರ್ ಆಫೀಸಿಗೆ ಬಂದಿದ್ದ ಪಾರ್ಸೆಲ್ ಅನ್ನು ತೆಗೆದುಕೊಂಡು ಬರಲು ತಮ್ಮನ ಜೊತೆ ಹೊರಟಿದ್ದೆ. ಹೊರಡುವ ಮುನ್ನ, 'ಅಕ್ಕ, ಎಲ್ಲಾರ್ ನಂಬರ್ ಇಟ್ಕೊಂಡಿದಿಯಾ' ಎಂದು ಕೇಳಿದ. 'ಹೂಂ, ಎಲ್ಲಾರ್ ನಂಬರೂ ಮೊಬೈಲಿನಲ್ಲಿದೆ' ಎಂದೆ. ಸರಿ ಎಂದು ಹೊರಟಿದ್ದಾಯಿತು. ಆಫೀಸಿಗೆ ಹೋದ ತಕ್ಷಣ, 'ಅಕ್ಕಾ, ಎಲ್ಲಾರ್ ನಂಬರ್ ಹೇಳು' ಅಂದ. 'ಏಯ್, ಎಲ್ಲಾರ್ ನಂಬರ್ ತೊಗೊಂಡು ಏನು ಮಾಡ್ತೀಯೋ, ಯಾರ ನಂಬರ್ ಬೇಕು ಕೇಳು, ಹೇಳ್ತೀನಿ' ಎನ್ನುತ್ತಿದ್ದಂತೆ ಬಿದ್ದು ಬಿದ್ದು ನಗಲಾರಂಭಿಸಿದ. 'ಅಲ್ವೇ, ಎಲ್ಲಾರ್ ನಂಬರ್ ಅಂದ್ರೆ, ಲಾರಿ ರಶೀದಿ ನಂಬರ್' ಎಂದಾಗ, ಹಣೆ ಚಚ್ಚಿಕೊಂಡು ಮತ್ತೊಮ್ಮೆ ಅದನ್ನು ತರಲು ಮನೆಯ ಕಡೆ ಹೊರಟಿದ್ದಾಯಿತು.

**ನಳಿನಿ ಟಿ. ಭೀಮಪ್ಪ**



## 'ಕೋತಿಗೊಬ್ಬ'



ಕಲೆ: ಗಣೇಶ ಆಚಾರ್ಯ

ಎಂಟನೆ ತರಗತಿಗೆ ಮೂವತ್ತಾರು ವಿದ್ಯಾರ್ಥಿಗಳು ದಾಖಲಾಗಿದ್ದರು. ಅವರ ಪರಿಚಯ ವಿಭಿನ್ನವಾಗಿ ಮಾಡಿಕೊಳ್ಳಲು ಬಯಸಿದ ನಾನು, 'ಒಬ್ಬೊಬ್ಬರಾಗಿ ನಿಮ್ಮ ಹೆಸರು, ಊರು, ನೆಚ್ಚಿನ ಹೀರೊ, ಹೀರೊಯಿನ್, ಇಷ್ಟದ ಸಿನಿಮಾ, ಹಾಡಿನ ಒಂದು ಸಾಲನ್ನು ಹಾಡಬೇಕು' ಎಂದು ಸೂಚಿಸಿದೆ. ಅದರಂತೆ ಮುಂದೆ ಬಂದ ವಿದ್ಯಾರ್ಥಿ, 'ನನ್ನ ಹೆಸರು ರಾಹುಲ್ ರಾಜ್, ಊರು ಬೊಮ್ಮನಹಳ್ಳಿ, ಮೆಚ್ಚಿನ ಹೀರೊ ಸುದೀಪ್, ಕೋತಿಗೊಬ್ಬ ಕೋತಿಗೊಬ್ಬ ಗೆಲ್ಲೋನು ಕೋತಿಗೊಬ್ಬ...' ಎಂದು ನಿರರ್ಗಳವಾಗಿ, ನಿಸ್ಸಂಕೋಚವಾಗಿ ಹಾಡತೊಡಗಿದ. ಅಷ್ಟೆ ನಿರ್ಭಿಡೆಯಿಂದ ನಾನು ಮತ್ತು ತರಗತಿಯಲ್ಲಿದ್ದ ವಿದ್ಯಾರ್ಥಿಗಳು ನಕ್ಕಿದ್ದೆ ನಕ್ಕಿದ್ದು. ಆಮೇಲೆ ತಿಳಿಯಿತು, ಆತನಿಗೆ 'ಟ' ಅಕ್ಷರವನ್ನು 'ತ' ಎಂದು ಉಚ್ಚರಿಸುವ ಸಮಸ್ಯೆ ಇದೆಯೆಂದು.

**ಮಲ್ಲಿಕಾರ್ಜುನ ಸುರಧೇನುಪುರ**